ಓ.ಎಸ್ ನಂ. 114/2022

ಪಿ. ಡಬ್ಲ್ಯೂ 1

**ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 24-03-2025 ರಂದು ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಂ ಎಲ್ ಎನ್ ಎಚ್ ವಕೀಲರಿಂದಃ**

ನಮ್ಮ ತಂದೆಯವರು ಸುಮಾರು 12 ವರ್ಷಗಳ ಹಿಂದೆಯೇ ಮೃತರಾಗಿದ್ದು , ನನಗೆ ನಿಖರವಾಗಿ ದಿನಾಂಕ ಗೊತ್ತಿರುವುದಿಲ್ಲಾ. ನನ್ನ ತಂದೆಯವರು ಮೃತರಾಗುವವರೆಗೆ ದಾವಾ ಆಸ್ತಿಗಳು ನನ್ನ ತಂದೆಯವರ ಹೆಸರಿನಲ್ಲೇ ಇತ್ತು ಎಂದರೆ ಸರಿ. ನನ್ನ ತಂದೆಯವರು ಮೃತರಾದ ನಂತರ ದಾವಾ ಆಸ್ತಿಯ ಕಂದಾಯ ದಾಖಲೆಗಳಲ್ಲಿ ಪ್ರತಿವಾದಿಯ ಹೆಸರು ನಮೂದಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಸ್ವತಃ ನಾನು ಆ ಉದ್ದೇಶದಿಂದಲೇ ನಮಗೂ ಸಹ ಹಕ್ಕಿರುತ್ತದೆ ಎಂದು ಈ ದಾವೆಯನ್ನು ದಾಖಲಿಸಿರುತ್ತೇನೆ ಎಂದು ನುಡಿಯುತ್ತಾರೆ. ತದನಂತರ ನಾವು ಚೌಕಾಶಿ ಮಾಡಿ ನಮ್ಮ ಅಕ್ಕನ ಹೆಸರು ಹೇಗೆ ದಾವಾ ಆಸ್ತಿಯ ಕಂದಾಯ ದಾಖಲೆಯಲ್ಲಿ ನಮೂದಾಗಿರುತ್ತದೆ ಎಂದುನಾವು ತಿಳಿದುಕೊಂಡಿರುತ್ತೇವೆ. ನಮ್ಮ ತಂದೆಯವರು ಮೃತರಾದ 2-3 ವರ್ಷದ ಬಳಿಕ ನಾವು ಸದರಿ ವಿಷಯವನ್ನು ತಿಳಿದುಕೊಂಡಿರುತ್ತೇವೆ. ಈ ದಾವೆಯನ್ನು ನಾನು ಹಾಗೂ ನನ್ನ ಎರಡು ಜನ ತಂಗಿಯರು ಈ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 173/2016 ನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ಅಸಲು ದಾವೆ ಸಂಖ್ಯೆ 173/2016 ನನ್ನ ಹಾಗೂ ನನ್ನ ಅಕ್ಕ ಪ್ರತಿವಾದಿಯ ವಿರುದ್ಧ ನನ್ನ ಎರಡು ಜನ ತಂಗಿಯಂದಿರು ಹೂಡಿರುತ್ತಾರೆ. ಸದರಿ ದಾವೆಯಲ್ಲಿ ನಾನು 2 ನೇ ಪ್ರತಿವಾದಿ ಎಂದು ಪಕ್ಷಗಾರಳಾಗಿದ್ದು , ನ್ಯಾಯಾಲಯಕ್ಕೆ ಹಾಜರಾಗಿದ್ದು ಇರುವುದಿಲ್ಲಾ. ಸದರಿ ದಾವೆಯನ್ನು 19.03.2019 ರಂದು ವಾದಿಯರು ದಾವೆ ನಡೆಸಲು ಇಚ್ಚಿಸುವುದಿಲ್ಲಾ ಎಂದು ವಜಾ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ತಂದೆಯವರು 10.01.2002 ರಲ್ಲಿ ಮೃತರಾಗಿರುತ್ತಾರೆಂದರೆ ನನಗೆ ಗೊತ್ತಿಲ್ಲಾ. ದಾವಾ ಶೆಡ್ಯೂಲ ಅನುಕ್ರಮ ಸಂಖ್ಯೆ 1 ನೇ ಆಸ್ತಿಯು ಖರೀದಿ ಮಾಡಿದ ಆಸ್ತಿ ಎಂದರೆ ಸರಿ. ಅದರ ಕ್ಷೇತ್ರ 11 ಆಣೆ ಎಂದರೆ ಸರಿ. ಸದರಿ ದಾವಾ ಆಸ್ತಿಯನ್ನು ಖರೀದಿಸಲು ಪ್ರತಿವಾದಿಯು ಹಣವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ , ಸಾಕ್ಷಿ ನಮ್ಮ ತಂದೆಯವರು ನೀಡಿರುತ್ತಾರೆ ಎಂದು ನುಡಿಯುತ್ತಾರೆ.

ನಾನು 1963 ರಲ್ಲಿ ಜನಿಸಿರುತ್ತೇನೆ. ದಾವಾ ಆಸ್ತಿಯನ್ನು ನಮ್ಮ ತಂದೆ ಖರೀದಿ ಮಾಡಿದ ಬಗ್ಗೆ ರಶೀದಿಯು ನಮ್ಮ ಬಳಿ ಇರುತ್ತದೆ. ನಮ್ಮ ತಂದೆ ತಾಯಿ ಕೂಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದು , ಅವರಿಗೆ ಬೇರೆ ಯಾವುದೇ ವೈಯಕ್ತಿಕ ಆದಾಯ ಇರಲಿಲ್ಲಾ. ನನಗಿಂತ ನನ್ನ ಅಕ್ಕ ಸುಮಾರು 5 ವರ್ಷ ದೊಡ್ಡವಳಿರುತ್ತಾಳೆ. ನನ್ನ ತಂದೆ ತಾಯಿಯ ಜೊತೆಗೆ ನನ್ನ ಅಕ್ಕ ಕೂಲಿ ಕೆಲಸಕ್ಕೆ ಹೋಗುತ್ತಿದ್ದರು ಎಂದರೆ ಸರಿ. ಸಾಕ್ಷಿ ಸ್ವತಃ ನಾನೂ ಸಹ ನನ್ನ ತಂದೆ ತಾಯಿಯೊಂದಿಗೆ ಕೂಲಿ ಕೆಸಕ್ಕೆ ಹೋಗುತ್ತಿದ್ದೆ ಎಂದು ಸಾಕ್ಷ್ಯ

ನುಡಿಯುತ್ತಾರೆ. ನನ್ನ ಅಕ್ಕ ವಿದ್ಯಾಭ್ಯಾಸ ಮಾಡಿರುವುದಿಲ್ಲಾ ಎಂದರೆ ಸರಿ. ನಾನು ಹಾಗೂ ನನ್ನ ತಂಗಿಯಂದಿರು 7 ನೇತರಗತಿಯವರೆಗೆ ಓದಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನಾವು ಖರ್ಚು ಮಾಡಿ ನಮ್ಮ ತಂಗಿಯಂದಿರಿಗೆ ಓದಿಸಿರುತ್ತೇವೆಂದು ಸಾಕ್ಷ್ಯ ನುಡಿಯುತ್ತಾರೆ. ದಾವಾ ಆಸ್ತಿಯ ಮನೆಯನ್ನು ನನ್ನ ಅಕ್ಕ ಪ್ರತಿವಾದಿ ಸ್ವಂತ ಖರ್ಚಿನಿಂದ ನಿರ್ಮಾಣ ಮಾಡಿರುತ್ತಾಳೆಂದರೆ ಸರಿಯಲ್ಲ. ನಾನೂ ಸಹ ಮನೆಯನ್ನು ನಿರ್ಮಾಣ ಮಾಡಲು ಖರ್ಚು ಮಾಡಿರುತ್ತೇನೆ.

ನನ್ನ ತಾಯಿ ಮೊದಲಿಗೆ ಮೃತರಾಗಿದ್ದು , ಬಳಿಕ ನಮ್ಮ ತಂದೆ ತೀರಿಕೊಂಡಿರುತ್ತಾರೆ. ನನ್ನ ತಾಯಿ ಮೃತರಾದ 10 ವರ್ಷಗಳ ನಂತರ ನನ್ನ ತಂದೆ ಮೃತರಾಗಿರುತ್ತಾರೆ. ನಾನು ಹಾಗೂ ನನ್ನ ತಂಗಿಯಂದಿರು ನಮ್ಮ ಮದುವೆಯ ಬಳಿಕ ನಾವುಗಳು ನಮ್ಮ ಗಂಡನ ಮನೆಯಲ್ಲೇ ವಾಸವಾಗಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನಾನು ಮದುವೆಯಾದ ನಂತರ ನನ್ನ ತಂದೆಯ ಮನೆಯಲ್ಲೇ ವಾಸವಾಗಿದ್ದೆ ಎಂದು ನುಡಿಯುತ್ತಾರೆ. 2 ನೇ ವಾದಿಯನ್ನು ಹೊನ್ನಾವರ ತಾಲೂಕಿನ ಕವಲಕ್ಕಿ ಗ್ರಾಮಕ್ಕೆ ಮದುವೆ ಮಾಡಿ ಕೊಡಲಾಗಿದೆ ಎಂದರೆ ಸರಿ. 2 ನೇ ವಾದಿಯನ್ನು ಕಾರವಾರದಿಂದ ಸುಮಾರು 100 ಕಿಮೀ ದೂರದ ಊರಿಗೆ ಮದುವೆ ಮಾಡಿಕೊಡಲಾಗಿದೆ ಎಂದರೆ ಸರಿ. 3 ನೇ ವಾದಿಯನ್ನು ಅಂಕೋಲಾ ತಾಲೂಕಿನ ಹೊಸಗದ್ದೆ ಗ್ರಾಮಕ್ಕೆ ಮದುವೆ ಮಾಡಿ ಕೊಟ್ಟಿದ್ದು ಅದು ಕಾರವಾರದಿಂದ 40 ಕಿಮೀ ದೂರದಲ್ಲಿರುತ್ತದೆ ಎಂದರೆ ಸರಿ. ಸದರಿ ನನ್ನ ತಂಗಿಯಂದಿರ ಆಧಾರ ಕಾರ್ಡ ಹಾಗೂ ಚುನಾವಣಾ ಗುರುತಿನ ಚೀಟಿಯಲ್ಲಿ ವಿಳಾಸವು ಅವರನ್ನು ಯಾವ ಊರಿಗೆ ಮದುವೆ ಮಾಡಿಕೊಡಲಾಗಿರುತ್ತದೋ ಅದೇ ವಿಳಾಸದಲ್ಲಿರುತ್ತದೆ ಎಂದರೆ ಸರಿ.

ನನ್ನ ಹಿರಿಯ ಸಹೋದರಿ ಪ್ರತಿವಾದಿ ಹಾಗೂ ನನಗೆ ಪ್ರತ್ಯೇಕ ಕುಟುಂಬದ ಪಡಿತರ ಚೀಟಿ ಇರುತ್ತದೆಂದರೆ ಸರಿ. ಸಾಕ್ಷಿಯು ಮೊದಲಿಗೆ ಒಂದೇ ಇತ್ತೆಂದು ನುಡಿಯುತ್ತಾರೆ. ಕುಟುಂಬದ ಪಡಿತರ ಚೀಟಿಯಲ್ಲಿ ನನ್ನ ತಂದೆ, ತಾಯಿ ಹಾಗೂ ಪ್ರತಿವಾದಿಯ ಹೆಸರು ಮಾತ್ರ ಇತ್ತೆಂದರೆ ಸರಿಯಲ್ಲ , ಸಾಕ್ಷಿಯು ನನ್ನ ಹೆಸರು ಸಹ ಇತ್ತು ಎಂದು ಸಾಕ್ಷ್ಯ ನುಡಿಯುತ್ತಾರೆ. ಕುಟುಂಬದ ಪಡಿತರ ಚೀಟಿಯು ಯಾರ ಯಾರ ಹೆಸರಿನಲ್ಲಿದೆ ಎಂದುಕಾಣಿಸಲು ಅವುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲಾ ಎಂದರೆ ಸರಿ, ಸಾಕ್ಷಿಯು ಬೇಕಾದರೆ ಹಾಜರು ಪಡಿಸಬಹುದು ಎಂದು ನುಡಿಯುತ್ತಾರೆ.

ನನ್ನ ತಂದೆಯು ಮೃತರಾಗುವ ಪೂರ್ವದಲ್ಲಿ ಮಾನಸಿಕವಾಗಿ ಹಾಗೂ ದೈಹಿಕವಾಗಿ ಆರೋಗ್ಯವಂತರಿದ್ದರು ಎಂದರೆ ಸರಿ. ನನ್ನ ತಂದೆಯವರು ಸಾಯುವ ಕಾಲಕ್ಕೆ ಅವರ ದೈನಂದಿನ ಚಟುವಟಿಕೆಗಳನ್ನು ಯಾರ ಸಹಾಯ ಇಲ್ಲದೇ ಅವರೇ ಮಾಡುತ್ತಿದ್ದರು ಎಂದರೆ ಸರಿ. ಏನಾದರೂ ಕೆಲಸ ಕಾರ್ಯಗಳನ್ನು ಮಾಡುವ ಪೂರ್ವದಲ್ಲಿ ಅವರು ನಮ್ಮ ಎಲ್ಲಾ ಹೆಣ್ಣು ಮಕ್ಕಳೊಂದಿಗೆ ಕುಳಿತುಕೊಂಡು

ಚರ್ಚಿಸುತ್ತಿದ್ದರೆಂದರೆ ಸರಿಯಲ್ಲ. ನನ್ನ ತಂದೆಯವರಿಗೆ ನನ್ನ ಹಿರಿಯ ಸಹೋದರಿ ಪ್ರತಿವಾದಿಯ ಮೇಲೆ ಅತಿ ಹೆಚ್ಚು ಪ್ರೀತಿ ಇತ್ತೆಂದರೆ ಸರಿಯಲ್ಲ. ಸಾಕ್ಷಿಯು ನಾಲ್ಕೂ ಮಕ್ಕಳ ಮೇಲೆ ಪ್ರೀತಿ ಇತ್ತೆಂದು ಸಾಕ್ಷ್ಯ ನುಡಿಯುತ್ತಾರೆ. ನನ್ನ ಅಕ್ಕನ ಮದುವೆಯ ನಂತರ ನನ್ನ ಮದುವೆ ಆಗಿರುತ್ತದೆ ಎಂದರೆ ಸರಿ. ನನ್ನ ಅಕ್ಕ ಮತ್ತು ನಾನು ಒಂದೇ ವ್ಯಕ್ತಿಯನ್ನು ವಿವಾಹ ಆಗಿರುತ್ತೇವೆ ಎಂದರೆ ಸರಿ.

ಸಾಕ್ಷಿಯು ಸ್ವತಃ ನನ್ನನ್ನು ನನ್ನ ಅಕ್ಕ ಮನೆಯಲ್ಲಿ ವಾಸ ಮಾಡಲು ಬಿಡದೇ ಮನೆಯಿಂದ ಹೊರ ಹಾಕಿದ್ದರಿಂದ ನಾನು ನಮ್ಮ ಮನೆಯ ಎದುರೇ ಇರುವ ಬೇರೆಯವರ ಮಾಲ್ಕಿ ಜಾಗದಲ್ಲಿ ಒಂದು ಸಣ್ಣ ಮನೆಯನ್ನು ನಿರ್ಮಾಣ ಮಾಡಿಕೊಂಡಿದ್ದೇನೆಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ ಮನೆಯನ್ನು ಸುಮಾರು 10 ವರ್ಷಗಳ ಹಿಂದೆ ನಿರ್ಮಾಣ ಮಾಡಿ ನಾನು ವಾಸಮಾಡಿಕೊಂಡು ಬಂದಿರುತ್ತೇನೆ. ನನ್ನ ತಂದೆಯವರು ದಿನಾಂಕಃ 10.02.1994 ರಂದು ನನ್ನ ಅಕ್ಕ ಪ್ರತಿವಾದಿಯ ಹೆಸರಿನಲ್ಲಿ ನೋಂದಾಯಿತ ವಿಲ್ ನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಲ್ ನಾಮೆಗೆ ನನ್ನ ತಂಗಿಯಂದಿರಿಬ್ಬರು ಸಾಕ್ಷಿದಾರರಿರುತ್ತಾರೆಂದರೆ ಸರಿಯಲ್ಲ. ದಾವಾ ಮನೆ ಮತ್ತು ಜಾಗವನ್ನು ನನ್ನ ಅಕ್ಕನೇ ಖರೀದಿ ಮಾಡಿದ್ದರಿಂದ ನನ್ನ ತಂದೆಯುಆಕೆಯ ಹೆಸರಿಗೆ ವಿಲ್ ನಾಮೆ ಬರೆದಿರುತ್ತಾರೆಂದರೆ ಸರಿಯಲ್ಲ. ನನಗೆ ಹಾಗೂ ನನ್ನ ತಂಗಿಯಂದಿರಿಗೆ ಈ ವಿಷಯ ಗೊತ್ತಿದ್ದರಿಂದಲೇ ನನ್ನ ತಂಗಿಯಂದಿರು ಅದನ್ನು ಪ್ರಶ್ನಿಸಿರುವುದಿಲ್ಲಾ ಎಂದರೆ ಸರಿಯಲ್ಲ.

ನನ್ನ ತಂದೆಯವರು ಪ್ರತಿವಾದಿ ನನ್ನ ಹಿರಿಯ ಸಹೋದರಿಗೆ ವಿಲ್ ನಾಮೆ ಯಾನೆ ಮರಣಶಾಸನವನ್ನು ಬರೆದುಕೊಟ್ಟಿದ್ದರಿಂದ ನನ್ನ ಹಿರಿಯ ಸಹೋದರಿಗೆ ದಾವಾ ಆಸ್ತಿಯಲ್ಲಿ ಕಾನೂನುಬದ್ಧ ಹಕ್ಕು ಪ್ರಾಪ್ತವಾಗಿದ್ದು , ನನಗೆ ಹಾಗೂ ನನ್ನ ತಂಗಿಯಂದಿರಿಗೆ ಯಾವುದೇ ಹಕ್ಕುಹಿತಾಸಕ್ತಿ ಇರುವುದಿಲ್ಲಾ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಹಾಗೂ ನನ್ನ ತಂಗಿಯಂದಿರು ಈ ದಾವೆ ಹೂಡಿರುತ್ತೇವೆಂದರೆ ಸರಿಯಲ್ಲ, ಈ ದಾವೆ ವಜಾ ಮಾಡಲು ಯೋಗ್ಯವಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲ –**

**(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ,**

**ಸಿವಿಲ್ ನ್ಯಾಯಾಧೀಶರು ಕಾರವಾರ**